ಗಿರಿಜನರಿಗೆ ಹಕ್ಕು ಪತ್ರ [RTC ನೀಡುವ ವಿಚಾರ]
(241): 143

ಶ್ರೀ ಮಂಜುನಾಥ್ ಹೆಚ್.ಪಿ(ಹುಣಸೂರು)

ಅ) ಮೈಸೂರು ಹಾಗೂ ಕೊಡಗು ಜಿಲ್ಲೆಯ ವ್ಯಾಪ್ತಿಗೆ ಬರುವ ರಾಜೀವ ಗಾಂಧಿ ರಾಷ್ಟ್ರೀಯ ಉದ್ಯಾನವನದಲ್ಲಿ ವಾಸಿಸುತ್ತಿದ್ದ ಗಿರಿಜನರನ್ನು ಸ್ಥಳಾಂತರಿಸಿ ಪುನರ್ ವಸತಿ ಕಲ್ಪಿಸಿರುವ ಹುಣಸೂರು ತಾಲ್ಲೂಕು ನಾಗಾಪುರ ಬ್ಲಾಕ್ 1 ರಿಂದ 6 ರವರೆಗಿನ ಗಿರಿಜನರ ಜಮೀನುಗಳಿಗೆ ಕಂದಾಯ ಇಲಾಖೆಯಿಂದ ಹಕ್ಕು ಪತ್ರ(ಪಹಣಿ) ಖಾತೆ ಮಾಡಿ ಪಹಣಿ ವಿತರಿಸಲಾಗಿದೆಯೇ?

ಆ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಇ) ವಿತರಿಸಿದ್ದಲ್ಲಿ ಎಷ್ಟು ಜನರಿಗೆ ವಿತರಿಸಲಾಗಿದೆ?

ಈ) ಗಿರಿಜನರು ಕಳೆದ ಹತ್ತು ವರ್ಷಗಳಿಂದ ಆರ್‌ಟಿಸಿ ದೊರೆಯದೆ ಸರ್ಕಾರದಿಂದ ದೊರಕುವ ಎಲ್ಲಾ ಸವಲತ್ತುಗಳಿಂದ ವಂಚಿತರಾಗಿದ್ದು, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್ ಈಶ್ವರಪ್ಪ ಉಪ ಮುಖ್ಯಮಂತ್ರಿಗಳು

ಅ) ರಾಜೀವ ಗಾಂಧಿ ರಾಷ್ಟ್ರೀಯ ಉದ್ಯಾನವನದಲ್ಲಿ ವಾಸಿಸುತ್ತಿದ್ದ ಗಿರಿಜನರನ್ನು ನಾಗಾಪುರ ಹಾಡಿಗೆ ಸ್ಥಳಾಂತರಿಸಿದ್ದು, ಅವರುಗಳಿಗೆ ವ್ಯವಸಾಯ ಉದ್ದೇಶಕ್ಕಾಗಿ ಜಮೀನು ಮಂಜೂರು ಮಾಡಲು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ 731 ಹೆಕ್ಟೇರ್ ಜಮೀನನನು 6 ಬ್ಲಾಕ್‌ಗಳಲ್ಲಿ ದಿನಾಂಕ 10.02.2012ರಲ್ಲಿ ಬಿಡುಗಡೆಯಾಗಿರುತ್ತದೆ.

ಅರಣ್ಯ ಇಲಾಖೆಯಿಂದ ಬಿಡುಗಡೆಯಾಗಿರುವ ವಿಸ್ತೀರ್ಣವು ತಾಳೆ ಇರುವ ಬ್ಲಾಕ್ ನಂ.4 ಮತ್ತು 5 ರಲ್ಲಿ 5 ಗಿರಿಜನರುಗಳಿಗೆ ತಲಾ 5-00 ಎಕರೆಯಂತೆ ಅಕ್ಟೋಬರ್ 2012ರ ಮಾಹೆಯಲ್ಲಿ ಮಂಜೂರು ಮಾಡಿ ಹಕ್ಕು ಪತ್ರ (ಸಾಗುವಳಿ ಚೀಟಿ) ನೀಡಿ ಖಾತೆ ಮಾಡಿ ಆರ್.ಟಿ.ಸಿ. ನೀಡಿರುತ್ತದೆ.

ಆದರೆ, ಬ್ಲಾಕ್ ನಂ.1, 2, 3 ಮತ್ತು 6 ರಲ್ಲಿನ ಗಿರಿಜನರಿಗೆ ಹಕ್ಕುಪತ್ರ ವಿತರಿಸಿರುವುದಿಲ್ಲ.

ಆ) ಅರಣ್ಯ ಇಲಾಖೆಯಿಂದ ಬಿಡುಗಡೆಯಾಗಿರುವ ಬ್ಲಾಕ್ ನಂ.1,2,3 ಮತ್ತು 6 ರಲ್ಲಿನ ವಿಸ್ತೀರ್ಣವು ಅರಣ್ಯ ಇಲಾಖೆಯಿಂದ ಪುನರ್ವಸತಿ ಬ್ಲಾಕ್‌ಗಳು-ರಚನೆ ಮಾಡಿದಂತೆ ಫಲಾನುಭವಿಗಳ ಅನುಭವ ಹಾಗೂ

ವಿಸ್ತೀರ್ಣದಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ಆದ್ದರಿಂದ 5-00 ಎಕರೆಗಿಂತ ಕಡಿಮೆ ಜಮೀನು ಲಭ್ಯವಿರುವ ವಿಸ್ತೀರ್ಣವನ್ನು ಆ ಕುಟುಂಬದವರಿಗೆ ಬೇರೆ ಬ್ಲಾಕ್‌ಗಳಲ್ಲಿ ಪಡೆದುಕೊಳ್ಳುವಂತೆ ಗಿರಿಜನ ಫಲಾನುಭವಿಗಳಿಗೆ ಸೂಚಿಸಲಾಗಿದೆ. ಹಾಗೇಯೇ 5-00 ಎಕರೆಗಿಂತ ಹೆಚ್ಚುವರಿ ಜಮೀನು ಹೊಂದಿರುವವರು ಅದನ್ನು ಬಿಟ್ಟುಕೊಡಲು ಸೂಚನೆ ನೀಡಲಾಗಿದೆ.

ಹೆಚ್ಚುವರಿ ಜಮೀನನ್ನು ವಾಪಸ್ಸು ಪಡೆದ ನಂತರ, ಜಂಟಿ ಅಳತೆ ಮೂಲಕ ಗುರುತಿಸಿ ತಲಾ 5-00 ಎಕರೆಯಂತೆ ಹಕ್ಕುಪತ್ರ ನೀಡಲು ಕ್ರಮ ಕೈಗೊಳ್ಳಲಾಗುವುದು.

ಇ) 5 ಗಿರಿಜನ ಕುಟುಂಬಗಳಿಗೆ ತಲಾ 5-00 ಎಕರೆಯಂತೆ ಮಂಜೂರು ಮಾಡಿ ಹಕ್ಕುಪತ್ರ ನೀಡಿರುತ್ತದೆ.

ಈ) ಶೀಘ್ರವೇ ಜಂಟಿ ಅಳತೆ ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಿ, ಅವರಿಗೆ ಸರ್ಕಾರದಿಂದ ದೊರೆಯಬಹುದಾದ ಸವಲತ್ತುಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗುವುದು.

ವಿಶೇಷ ವಿಮಾನ ಪ್ರಯಾಣ
(255): 290

ಶ್ರೀ ರಾಮಲಿಂಗ ರೆಡ್ಡಿ

ಅ) 2009ನೇ ಜನವರಿಯಿಂದ ಇಲ್ಲಿಯವರೆಗೆ ರಾಜ್ಯ ಸಚಿವ ಸಂಪುಟದ ಸದಸ್ಯರುಗಳು (ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಇತರೆ ಸಚಿವರುಗಳು) ವಿಶೇಷ ವಿಮಾನದಲ್ಲಿ ಕೈಗೊಂಡ ಪ್ರವಾಸದ ವಿವರಗಳು ಹಾಗೂ ಇದಕ್ಕಾಗಿ ಖರ್ಚಾದ ಹಣದ ವಿವರ ನೀಡುವುದು?

ಶ್ರೀ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಗಳು

ಅ) ಮಾನ್ಯ ಮುಖ್ಯಮಂತ್ರಿಗಳು, ಸಚಿವ ಸಂಪುಟದ ಸದಸ್ಯರುಗಳು, ಉಪಮುಖ್ಯಮಂತ್ರಿಗಳು ಹಾಗೂ ಇತರ ಸಚಿವರುಗಳು ವಿಶೇಷ ವಿಮಾನ ಸೇವೆಯನ್ನು ಉಪಯೋಗಿಸಿಕೊಂಡಿರುವ ಪ್ರವಾಸದ ವಿವರ ಹಾಗೂ ಇದಕ್ಕಾಗಿ ಖರ್ಚಾದ ಹಣದ ವಿವರವನ್ನು ಅನುಬಂಧದಲ್ಲಿ ನಮೂದಿಸಿ ಈ ಉತ್ತರದೊಂದಿಗೆ ಲಗತ್ತಿಸಲಾಗಿದೆ.